ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ರಾಸೇಯೋ:ಪಪೂಶಿ/02/2019

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 19/07/2019

## ಜ್ಞಾಪನ

ವಿಷಯ:-ನಿರ್ದೇಶನಾಲಯದ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ದಿನಾಂಕ ಮುಂದುಡಿರುವ ಬಗ್ಗೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣೋತ್ಸವದ ಅಂಗವಾಗಿ ಘಟಕದಲ್ಲಿ ಕಾರ್ಯಕ್ರಮವನ್ನು ನಡೆಸುವ ಬಗ್ಗೆ.

ಉಲ್ಲೇಖ: ಸಂಖ್ಯೆ: ಯುಸೇಇ/ರಾಸೇಯೋ/37/2018-19/203 ದಿನಾಂಕ: 17/07/2019

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2018-19ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ನಿರ್ದೇಶನಾಲಯದ ಮಟ್ಟದ ಪ್ರಶಸ್ತಿಗಾಗಿ ಎನ್.ಎಸ್.ಎಸ್ ಘಟಕಗಳುಳ್ಳ ಪದವಿ ಪೂರ್ವ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಕಾಲೇಜಿನ ಪ್ರಾಂಶುಪಾಲರು/ಕಾರ್ಯಕ್ರಮಾಧಿಕಾರಿಗಳು /ಸ್ವಯಂ ಸೇವಕರು-ಸ್ವಯಂಸೇವಕಿಯರು ನಿಗದಿತ ನಮೂನೆಗಳಲ್ಲಿ ಪ್ರಶಸ್ತಿಗಳಿಗಾಗಿ ಪ್ರಸ್ತಾವನೆಗಳನ್ನು ದಿನಾಂಕ: 27/7/2019ರ ಒಳಗಾಗಿ ಕೇಂದ್ರಕಛೇರಿ, ಎನ್.ಎಸ್.ಎಸ್ ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012. ಇಲ್ಲಿಗೆ ಮುದ್ದಾಂ ಆಗಿ ಅಥವಾ ನೊಂದಾಯಿತ ಅಂಚೆ ಮೂಲಕ ಕಳುಹಿಸಲು ಕೋರಿದೆ. ಹಾಗೂ ಪದವಿ ಪೂರ್ವ ಶಿಕ್ಷಣ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ಸುವರ್ಣಮಹೋತ್ಸವದ ಅಂಗವಾಗಿ ಸಂಚಿಕೆ ಬಿಡುಗಡೆ ಮಾಡಲು ಘಟಕದಲ್ಲಿ ಪ್ರಮುಖ ಕಾರ್ಯ ನಿರ್ವಹಿಸಿರುವ ಲೇಖನ (Article) ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಂಡುವುದು.

ಈಗಾಗಲೇ ಕಳುಹಿಸಿರುವ ಘಟಕಗಳು ಪ್ರಸ್ತಾವನೆಗಳನ್ನು ಹೊರತು ಪಡಿಸಿ,ಸದರಿಯವರು ನಿರ್ದೇಶನಾಲಯದ ಮಟ್ಟದ ಪ್ರಶಸ್ತಿಗಳಾದ ಅತ್ಯುತ್ತಮ ಘಟಕ, ಅತ್ಯುತ್ತಮ ಕಾರ್ಯಕ್ರಮ ಅಧಿಕಾರಿ ಮತ್ತು ಅತ್ಯುತ್ತಮ ಸ್ವಯಂ ಸೇವಕ/ಸ್ವಯಂ ಸೇವಕಿಯರ ಆಯ್ಕೆಗಾಗೆ ದಿನಾಂಕ : 27-07-2019ರೊಳಗೆ ಈ ಕೆಳಗಿನ ನಿಬಂದನೆಗಳಿಗೆ ಒಳಪಟ್ಟು ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ಸೂಚಿಸಿದೆ.

ಸಂಬಂಧಿಸಿದ ಸುವರ್ಣೋತ್ಸವದ ಅಂಗವಾಗಿ ಕಾರ್ಯಕ್ರಮವನ್ನು ರಾಜ್ಯ ಸಂಪರ್ಕಾಧಿಕಾರಿಗಳ ಮಾರ್ಗಸೂಚಿಯಂತೆ ಕೈಗೊಳ್ಳಲು ಸೂಚಿಸಲಾಗಿದೆ. ಸರ್ಕಾರದ ಮಾರ್ಗಸೂಚಿ ಪತ್ರವನ್ನು ಇದರೊಂದಿಗೆ ಲಗತ್ತಿಸಲಾಗಿದೆ.

1. ಕಾಲೇಜುಗಳ ಸ್ವಯಂ ಸೇವಕ/ಸೇವಕಿಯರ ಪ್ರಸ್ತಾವನೆ ಕಳುಹಿಸುವಾಗ ಎನ್.ಎಸ್.ಎಸ್.ನಲ್ಲಿ 2 ವರ್ಷ ಪೂರೈಸಿರುವ ವಿದ್ಯಾರ್ಥಿಗಳ ಪ್ರಸ್ತಾವನೆಗಳನ್ನು ಮಾತ್ರ ಕಳುಹಿಸಬೇಕು.
2. ಅತ್ಯುತ್ತಮ ಘಟಕ ಪ್ರಶಸ್ತಿಗಳಿಗಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂದರ್ಶನವನ್ನು ನಡೆಸಲಾಗುವುದು ಹಾಗೂ ಘಟಕಗಳಿಗೆ ಭೇಟಿ ನೀಡಿ ಕಾರ್ಯ ಯೋಜನೆಯನ್ನು ಪರಿಸೀಲಿಸಲಾಗುವುದು.
3. ಪ್ರಶಸ್ತಿಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸಲು ನಿಗದಿತ ನಮೂನೆಗಳನ್ನು ಇಲಾಖೆಯ ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ.
4. ಸ್ವಯಂ ಸೇವಕರು ಪ್ರಸ್ತಾವನೆಗಳೊಂದಿಗೆ ತಮ್ಮ ಭಾವಚಿತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
5. ಕಾಲೇಜುಗಳ ಪ್ರಸ್ತಾವನೆಗಳನ್ನು ಕಳುಹಿಸುವಾಗ ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳ ಭಾವಚಿತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.
6. ಪ್ರಸ್ತಾವನೆಯೊಂದಿಗೆ ಮಾರ್ಗದರ್ಶಿ ಸೂತ್ರದಲ್ಲಿರುವ ನಿಗದಿತ ನಮೂನೆಯಲ್ಲಿ ಚೆಕ್‌ಲಿಸ್ಟ್‌ನ್ನು ಕಡ್ಡಾಯವಾಗಿ ಕಳುಹಿಸಬೇಕು. ಚೆಕ್‌ಲಿಸ್ಟ್‌ನ್ನು ಪ್ರತ್ಯೇಕವಾಗಿ ಕಳುಹಿಸಬೇಕು ಪ್ರಸ್ತಾವನೆಗೆ ಸೇರಿಸಬಾರದು.
7. ಪ್ರಸ್ತಾವನೆಯು ಒಟ್ಟು 100 ಪುಟಗಳಿಗೆ ಮೀರದಂತೆ (ಭಾವಚಿತ್ರಗಳನ್ನು ಒಳಗೊಂಡಂತೆ) ನೀಡುವುದು.
8. ಪ್ರಸ್ತಾವನೆಗಳನ್ನು ದಿನಾಂಕ 27/07/2019ರ ಒಳಗಾಗಿ ರಾಜ್ಯಸಂಯೋಜನಾಧಿಕಾರಿಗಳು, ಕೇಂದ್ರ ಕಛೇರಿ, ಎನ್.ಎಸ್.ಎಸ್ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ ಬೆಂಗಳೂರು ಇಲ್ಲಿಗೆ ಮುದ್ದಾಂ ಆಗಿ ಅಥವಾ ನೊಂದಾಯಿತ ಅಂಚೆ ಮೂಲಕ ಕಳುಹಿಸಲು ಕೋರಿದೆ.

ಪ್ರಸ್ತಾವನೆಗಳನ್ನು ಕಳುಹಿಸುವಾಗ ಮೇಲಿನ ನಿಬಂದನೆಗಳನ್ನು ಅನುಸರಿಸಲಾಗಿದೆಯೇ ಎಂಬುದನ್ನು ಪ್ರಾಂಶುಪಾಲರು ಖಚಿತಪಡಿಸಿಕೊಂಡು ಪ್ರಸ್ತಾವನೆಗಳನ್ನು ಕಳುಹಿಸಬೇಕು. ಈ ಬಗ್ಗೆ ಯಾವುದೇ ಮಾಹಿತಿ ಅಗತ್ಯವಿದ್ದಲ್ಲಿ ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು (ಶ್ರೀ ಮತಿ ಗಾಯಿತ್ರಿ ರೆಡ್ಡಿ ಮೊಬೈಲ್ ಸಂಖ್ಯೆ: 9845298166)ಸಂಪರ್ಕಿಸಬಹುದಾಗಿದೆ. ಪ್ರಾಂಶುಪಾಲರುಗಳು ಹೆಚ್ಚಿನ ಮುತುವರ್ಜಿ ವಹಿಸಿ ತಮ್ಮ ಕಾಲೇಜುಗಳಿಗೆ ಅತ್ಯುತ್ತಮ ಘಟಕ, ಯೋಜನಾಧಿಕಾರಿ, ಸ್ವಯಂ ಸೇವಕ/ಸ್ವಯಂ ಸೇವಕಿಯರಿಗೆ ಪ್ರಶಸ್ತಿ ಬರುವಂತೆ ಸಹಕರಿಸಲು ಕೋರಲಾಗಿದೆ.

<u>ವಿಶೇಷ ಸೂಚನೆ:</u> ಎನ್.ಎಸ್.ಎಸ್.ನ ದೈನಂದಿನ ಚಟುವಟಿಕೆಯ 2ನೇ ಕಂತಿನ ಮತ್ತು ಪ್ರಯಾಣ ಭತ್ಯೆಯ ಅನುದಾನವನ್ನು ಹಾಗೂ 2019-20ನೇ ಸಾಲಿನ ಅನುದಾನವನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ನಂತರ ನೀಡಲಾಗುವುದು. ಹಾಗೂ ವಿದ್ಯಾರ್ಥಿಗಳ ನೋಂದಾಣಿ ಪಟ್ಟಿಯನ್ನು gayathrireddynss@gmail.com ಗೆ ಕಳುಹಿಸಿಕೊಂಡುವುದು.

ತಮ್ಮ ವಿಶ್ವಾಸಿ

(ಶ್ರೀಮತಿ ಗಾಯಿತ್ರಿ ರೆಡ್ಡಿ ಪಿ.ಆರ್)
ರಾಜ್ಯ ಸಂಯೋಜನಾಧಿಕಾರಿಗಳು
ರಾಷ್ಟ್ರೀಯ ಸೇವಾ ಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, ಬೆಂಗಳೂರು.